ಆತನ ಹೆಸರು ಆಂಜನೇಯ. ಕೇಂದ್ರ ಸರ್ಕಾರದ ಸೇವೆಯಲ್ಲಿದ್ದು ಆರು ವರ್ಷದ ಕೆಳಗೆ ನಿವೃತ್ತರಾದವರು. ಇಬ್ಬರು ಮಕ್ಕಳು ವಿದೇಶಗಳಲ್ಲಿ ಉತ್ತಮ ಉದ್ಯೋಗದಲ್ಲಿದ್ದಾರೆ.

ಆಂಜನೇಯ ಅವರ ಪತ್ನಿ ಆಕಸ್ಮಿಕವಾಗಿ ಒಂದು ಅಪಘಾತದಲ್ಲಿ ತೀರಿಕೊಂಡರು. ಆಗ ಮಕ್ಕಳಿಬ್ಬರೂ ಸಣ್ಣವರು. ಇನ್ನೂ ಪ್ರಾಥಮಿಕ ಶಾಲೆಯಲ್ಲಿದ್ದರು. ಆಂಜನೇಯ ಅವರ ತಾಯಿ 'ನಾನು ಮುದುಕಿಯಾದೆ ಹುಡುಗರಿನ್ನೂ ಸಣ್ಣವರು. ನನಗೇನಾದರೂ ಆದರೆ ಇವರ ಗತಿಯೇನು? ಇನ್ನೊಂದು ಮದುವೆ ಮಾಡಿಕೋ' ಎಂದು ಮಗನನ್ನು ಎಷ್ಟೋ ಕೇಳಿದರು.

ಆದರೆ ಆಂಜನೇಯ ಕೇಳಲಿಲ್ಲ. ತಾಯಿಯ ಮೇಲೆ ಕೋಪದಿಂದ 'ಅಮ್ಮ ಮಕ್ಕಳು ಬಾಯಿಲ್ಲದವರು, ಹೊಸದಾಗಿ ಬಂದವಳು ತಗಾದೆ ಮಾಡಿ ನನ್ನನ್ನು ಬೇರೆ ಸಂಸಾರ ಮಾಡಲು ಅಣಿ ಮಾಡಿದರೆ ಈ ಮಕ್ಕಳನ್ನು ಮತ್ತು ನಿನ್ನನ್ನು ನೋಡೋರಾರು? ಯೋಚಿಸಿ ನೋಡು' ಎಂದು ತಾಯಿಗೆ ತಿಳಿ ಹೇಳಿ ಇಪ್ಪತ್ತೈದು ವರ್ಷಗಳ ಹಿಂದೆಯೇ ಮತ್ತೊಂದು ಮದುವೆ ಬೇಡವೇ ಬೇಡ ಎಂದಾಗ ಅವನಿಗೆ ತಾಯಿ ಎದುರಾಡಲಿಲ್ಲ. ಆದರೆ ಮಗನನ್ನೂ, ಮೊಮ್ಮಕ್ಕಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಂಡಳು.

ಇಬ್ಬರು ಮಕ್ಕಳಿಗೆ ಒಳ್ಳೇ ಸಂಬಂಧಗಳ ನೋಡಿ ಸಂಭ್ರಮದಿಂದ ಮದುವೆ ಮಾಡಿದರು. ಆಗಲೇ ಆಂಜನೇಯ ಉನ್ನತಾಧಿಕಾರಿ ಸ್ಥಾನದಲ್ಲಿದ್ದರು. ಮದುವೆಗಳ ವೈಭವ, ಬಂಧುಗಳ ಉತ್ತಮ ಪರಿಸ್ಥಿತಿಗಳನ್ನು ಕಂಡವರೆಲ್ಲಾ ಅದು ಹೇಗೆ ಇಂತಹ ಸಂಬಂಧಗಳನ್ನು ಕಂಡುಹಿಡಿದೆ ಎಂದು ಯಾರಾದರೂ ಆಂಜನೇಯರನ್ನು ಕೇಳಿದರೆ ಎಲ್ಲಕ್ಕೂ ಕಾರಣ ವಧೂ ವರಾನೇಷ್ವಣೆ ಕೇಂದ್ರದ ರಾಮಕೃಷ್ಣನನ್ನು ತೋರಿಸಿದರು.

ಮಕ್ಕಳಿಗೆ ಮದುವೆಯಾದ ನಂತರ ಸುಖವಾಗಿ ವಾಸ ಮಾಡಲು ಅನುಕೂಲವಾಗುವಂತೆ ಆಂಜನೇಯ ದೊಡ್ಡ ಮನೆ ಕಟ್ಟಿದರು. ಮಕ್ಕಳೊಂದಿಗೆ ಎಲ್ಲರೂ ಆನಂದದಿಂದ ಜೀವಿಸಬಹುದೆಂದು ಅವರು ಕನಸು ಕಂಡರು. ಆದರೆ ಆ ಆನಂದದಿಂದ ಕ್ಷಣಿಕವೆಂದು ಅವರು ಊಹಿಸಲಿಲ್ಲ. ಮಗನ ಮತ್ತು ಮೊಮ್ಮಕ್ಕಳ ಸುಂದರ ಬದುಕನ್ನು ಕಂಡು ಸಂತಸದಿಂದ ಉಬ್ಬಿಹೋದ ಆಂಜನೇಯ ಅವರ ತಾಯಿ ಮುಂದೆ ನಡೆದ ಘಟನೆಗಳನ್ನು ಸಹಿಸುವುದು ಕಷ್ಟವಾಯಿತು.

ಒಂದು ದಿನ ಹಿರೀ ಮಗ ತಂದೆಯ ಹತ್ತಿರ ಬಂದು ತಾನು ಅಮೆರಿಕಾಕ್ಕೆ ಹೋಗುತ್ತಿರುವುದಾಗಿ ತಿಳಿಸಿದ. ಆ ಕ್ಷಣದಲ್ಲಿ ಆಂಜನೇಯ ತುಂಬಾ ಸಂತೋಷಪಟ್ಟರು. ತಾನು ಇಂಡಿಯಾ ದೇಶವನ್ನೇ ಸರಿಯಾಗಿ ನೋಡಿಲ್ಲ. ಆದರೆ ತನ್ನ ಮಗನು ಅಮೆರಿಕಾ ಹೋಗುತ್ತಿದ್ದೇನೆಂದಾಗ ಆತನ ಸಂತೋಷಕ್ಕೆ ಎಣೆಯಿಲ್ಲದಾಯಿತು. ಸಂಭ್ರಮದಿಂದ ಕಳಿಸಿಕೊಟ್ಟರು.

ಅನಂತರ ಎರಡು ತಿಂಗಳಲ್ಲೇ ಎರಡನೇ ಮಗ ಬಂದ ಅಮೆರಿಕಾದಲ್ಲಿ ಅಣ್ಣ ಮಾಡುವ ಕಂಪೆನಿಯಲ್ಲೇ ತನಗೂ ಕೆಲಸ ಸಿಕ್ಕಿದೆಯೆಂದು ತಿಳಿಸಿದ. ಆಂಜನೇಯ ನಿಬ್ಬೆರಗಾದರು. ಮರುಕ್ಷಣ ನಿಶ್ಚೇಷ್ಟಿತನಾದ. ಏನು ನಡೆಯುತ್ತಿದೆ ಎಂದು ಆತನಿಗೆ ಅರ್ಥವಾಗಲೇ ಇಲ್ಲ.

ಮರುದಿನವೇ ಎರಡನೇ ಮಗ ಅಮೆರಿಕಾಕ್ಕೆ ಹಾರಿದ. ಆಗಲೇ ಆಂಜನೇಯನಿಗೆ ಅನುಮಾನ ಉಂಟಾಯಿತು. ಅಣ್ಣ ತಮ್ಮಂದಿರಿಬ್ಬರೂ ಸೇರಿ ಅಮೆರಿಕಾ ಹೋಗುವ ಯೋಜನೆ ಮಾಡಿದರೆಂದು ಅದಕ್ಕೆ ಅವರ ಹೆಂಡಂದಿರ ಒತ್ತಾಸೆ ಕಾರಣವೆಂದೂ, ಅಂದುಕೊಂಡಂತೆ ಎಲ್ಲ ನಡೆಯುತ್ತದೆಂದು ಆತನಿಗೆ ಊಹಿಸಲೂ ಸಾಧ್ಯವಾಗಲಿಲ್ಲ.

ಆರು ತಿಂಗಳ ನಂತರ ಅಣ್ಣ ತಮ್ಮಂದಿರು ಇಂಡಿಯಾ ಬರುತ್ತಿದ್ದೇವೆಂದು ಫೋನು ಮಾಡಿದರು. ಬರ ಬರುತ್ತಲೇ ಗಂಟುಮೂಟೆ ಕಟ್ಟಿಕೊಂಡು, ಹೆಂಡಂದಿರನ್ನು ಕರಕೊಂಡು ಅಮೆರಿಕಾ ಹೋಗುತ್ತೇವೆಂದು ಹೇಳಿದರು.

ಆಂಜನೇಯ ಇನ್ನೇನು ಮಾತಾಡಬಲ್ಲ, ಮೌನವಾಗಿ ಗೋಡೆಯ ಪಕ್ಕಕ್ಕೆ ಕುಸಿದು ಹೋದ. ಆಂಜನೇಯನ ತಾಯಿ ನಾನಾ ರಂಪ ಮಾಡಿದಳು. 'ನಿಮ್ಮೆಲ್ಲರಿಗೆಂದು ನಿಮ್ಮಪ್ಪ ಇಷ್ಟು ದೊಡ್ಡ ಮನೆ ಕಟ್ಟಿದರು. ಈಗ ಈ ದೊಡ್ಡ ಮನೆಯಲ್ಲಿ ನಾವಿಬ್ಬರೇ ಬಿಕೋ ಎಂದು ಕಾಲ ಕಳೆಯಬೇಕೆ?' ಎಂದಳು.

'ಅಂದರೆ ಈ ಮನೆಗಾಗಿ ಲಕ್ಷ ಲಕ್ಷ ಸಂಬಳದ ನಮ್ಮ ಕೆಲಸ ಬಿಟ್ಟು ನಮ್ಮ ಬಂಗಾರದಂತಹ ಭವಿಷ್ಯವನ್ನು ಹಾಳು ಮಾಡಿಕೊಳ್ಳಬೇಕೆ? ಇಂದೋ ನಾಳೆಯೋ ಉದುರಿ ಹೋಗುವ ನಿಮಗಾಗಿ ನಾವು ಇಲ್ಲಿದ್ದು ಅಪ್ಪನಂತೆ ಏಳದ ಬೀಳದ ಜೀವನ ನಡೆಸಬೇಕೆ? ನೋ, ನೆವರ್' ಎಂದು ಇಬ್ಬರೂ ಹೇಳಿದರು.

'ಬಾಯಿ ಮುಚ್ಚಿ, ನಿಮ್ಮ ಅಮ್ಮನಿಗಾಗಿ ನನಗಾಗಿ ನೀವು ಯಾವ ತ್ಯಾಗವನ್ನೂ ಮಾಡಬೇಕಾಗಿಲ್ಲ. ನಿಮ್ಮ ಒಳಿತನ್ನು ನೀವು ನೋಡಿಕೊಳ್ಳಿ' ಎಂದು ಗುಂಡಿಗೆಯ ಪರಿತಾಪವನ್ನು ಅದುಮಿಕೊಂಡು ಆಂಜನೇಯ ನುಡಿದರು.

'ಶುಭವಾಗಲಿ, ಪ್ರಯಾಣ ಮಾಡಿ ಎಂದು ತಾಯಿ ಮಗ ಮತ್ತೇನು ಮಾತಾಡದೆ ನಾಲ್ವರನ್ನು ನಗುತ್ತಾ ಆಶೀರ್ವದಿಸಿ ಕಳಿಸಿದರು.

'ಅಮ್ಮ ನನಗಿನ್ನೂ ನಾಲ್ಕು ವರ್ಷ ಸರ್ವೀಸಿದೆ. ನಾನಿರುವವರೆಗೆ ನಿನಗೆ ನಾನು ನನಗೆ ನೀನು ನಮಗೆ ನಾವು ಈ ಬಳಗವೇ ಸಾಕಮ್ಮಾ' ಎಂದು ಮಕ್ಕಳನ್ನು ಸೊಸೆಯರನ್ನು ವಿಮಾನಾಶ್ರಯದಲ್ಲಿ ಬೀಳ್ಕೊಟ್ಟು ಬರುವಾಗ ಎದೆಯಿಂದ ಉಕ್ಕಿ ಬರುತ್ತಿದ್ದ ದುಃಖವನ್ನು ತಾಳಲಾರದೆ ತಾಯಿಯ ಭುಜದ ಮೇಲೆ ತಲೆಯಿಟ್ಟು ಮಗುವಿನಂತೆ ಗಳಗಳ ಅತ್ತರು ಆಂಜನೇಯ.

'ಮಗನೇ, ಅವರು ತಾಯಿಯಿಲ್ಲದ ಮಕ್ಕಳು ಅಮ್ಮನ ಬೆಲೆ ನಿನಗೆ ತಿಳಿದಷ್ಟು ಅವರಿಗೆ ತಿಳಿಯದು' ಎಂದು ಮಗನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಸಮಾಧಾನ ಮಾಡಿದಳು.

ನಾಲ್ಕು ವರ್ಷಗಳು ಹೀಗೆಯೇ ಸಾಗಿದವು. ಆಂಜನೇಯ ಪದವಿಯಿಂದ ನಿವೃತ್ತರಾದರು. ಆಗ ಒಂದು ದಿನ ಕಿರಿ ಮಗ ಫೋನ್ ಮಾಡಿ 'ಅಪ್ಪ ನೀವು ನಿವೃತ್ತರಾದರಲ್ಲ. ನಿಮಗೆ ನಿವೃತ್ತಿಯ ನಂತರ ತುಂಬಾ ಹಣ ಬಂದಿರಬೇಕು' ಎಂದ.

ಆಗ 'ಎಷ್ಟು ಬಂದರೇನು ಫಲ, ರಿಟೈರಾದ ಮೇಲೆ ನೀವಿಲ್ಲದ ದಿಗಿಲು ತಿಳಿಯುತ್ತದೆ. ಏನು ಮಾಡಬೇಕೋ ತಿಳಿಯುತ್ತಿಲ್ಲ' ಎಂದು ಆಂಜನೇಯ ನಿರಾಳವಾಗಿ ನುಡಿದರು.

'ಇನ್ನು ಅಲ್ಲಿ ಅಷ್ಟು ದೊಡ್ಡ ಮನೆ ನಮಗೇಕೆ ಬೇಕು? ಅದನ್ನು ಮಾರಿ ಬಾಕಿ ಸಾಕಿ ಏನಾದರೂ ಇದ್ದರೆ ಕಟ್ಟಿ ಉಳಿದದ್ದನ್ನು ಬ್ಯಾಂಕಿಗೆ ಹಾಕಿದರಾಯಿತು. ಅಲ್ಲಿಯ ತೊಂದರೆಗಳನ್ನು ಮುಗಿಸಿಕೊಂಡು ನೀವೊಮ್ಮೆ ಅಮೆರಿಕಾ ಬರಬಾರದೇ' ಎಂದ.

'ನಾನೊಬ್ಬನೇ ಹೇಗೆ ಬರಲಿ. ನಿಮ್ಮ ಅಜ್ಜಿ ಇದ್ದಾರಲ್ಲಾ' ಆಗಲೇ ಆಂಜನೇಯನಿಗೆ ತಲೆ ತಿರುಗಿದಂತಾಯಿತು. ಆಗ ಎರಡನೇ ಮಗ 'ಅಜ್ಜಿಯನ್ನು ವೃದ್ಧಾಶ್ರಮದಲ್ಲಿ ಸೇರಿಸಿ ಬನ್ನಿ ಅಪ್ಪಾ' ಎಂದು ಉಚಿತ ಸಲಹೆ ನೀಡಿದ.

ಮಕ್ಕಳ ಮಾತುಗಳಿಂದ ಆಘಾತವಾಗಿ ನಿಸ್ಸಹಾಯಕನಾಗಿ ಆಂಜನೇಯ ಕುರ್ಚಿಯಲ್ಲಿ ಕುಸಿದರು. ಈ ಮಕ್ಕಳು ಚಿತೆಯಂಟಿಸಲು ಆಲೋಚನೆ ಮಾಡುವವರೆಂದು ಆತನಿಗೆ ತಿಳಿಯಿತು. ಕೊನೆಗೆ ಅಜ್ಜಿಯನ್ನು ಒಂದು ವಸ್ತುವಿನಂತೆ ಭಾವಿಸಿದರು. ಆಕೆಯನ್ನು ಎಲ್ಲೋ ಬಿಟ್ಟು ಅಮೆರಿಕಾಕ್ಕೆ ಬಾ ಎನ್ನುತ್ತಿದ್ದಾರೆ. ಅಷ್ಟು ವರ್ಷ ಅಮ್ಮನ ತುತ್ತು ತಿಂದು ಬೆಳೆದದ್ದನ್ನು ಮರೆತರಲ್ಲಾ ವಿಶ್ವಾಸಘಾತಕರು. ಸಿಟ್ಟಿನಿಂದ ಹಲ್ಲು ಕಡಿದರು. ಅದಕ್ಕಿಂತ ಇನ್ನೇನು ಮಾಡಬಲ್ಲರು ಆತ.

ಅಡಿಗೆ ಮನೆಯಲ್ಲಿದ್ದ ಮುದುಕಿಗೆ ವಿಷಯ ಸ್ವಲ್ಪ ಸ್ವಲ್ಪ ತಿಳಿಯಿತು. ಹೋಗಲಿ ಬಿಡೋ, ಅವರಿಗೆ ಬೇಕಿಲ್ಲದ ಆಸ್ತಿ ನಿನಗೇಕೆ? ಮಾರಿ ಬಿಸಾಕು' ಎಂದರಾಕೆ.

ಆದರೆ ಎಷ್ಟೋ ಕಷ್ಟಪಟ್ಟು ಇಷ್ಟಪಟ್ಟು ಕಟ್ಟಿದ ಮನೆಯನ್ನು ಮಾರಲು ಮನಸ್ಸು ಬರಲಿಲ್ಲ. ಆರು ವರ್ಷ ಕಳೆದವು. ವಿಶಾಲವಾದ ಮನೆ. ತಾನೊಂದು ಕಡೆ, ತಾಯಿ ಒಂದು ಕಡೆ ಶುಭ್ರ ಮಾಡಿದರೂ ಕೆಲಸ ಮುಗಿಯುವುದಿಲ್ಲ. ಕೆಲಸ ಮಾಡುವವರು ಸಿಗೋದು ದುಸ್ತರವಾಯಿತು. ಅಂತೂ ಕೊನೆಗೊಮ್ಮೆ ಮನೆ ಮಾರುವುದೇ ಸರಿಯೆಂದು ಪತ್ರಿಕೆಯಲ್ಲಿ ಪ್ರಕಟಣೆ ನೀಡಿದರು. ಮನೆ ಮಾರಿ ಬಂದ ಹಣದಲ್ಲಿ ಬ್ಯಾಂಕ್ ಸಾಲ ತೀರಿಸಿ ಉಳಿದ ಮೊತ್ತದಲ್ಲಿ ಒಂದು ಫ್ಲಾಟ್ ಖರೀದಿಸಿದರು. ಇದಾದ ಮೇಲೆ ಉಳಿದ ಇಪ್ಪತ್ತೈದು ಲಕ್ಷವನ್ನು ತನ್ನ ಮತ್ತು ತನ್ನ ತಾಯಿಯ ಹೆಸರಿನಲ್ಲಿ ಬ್ಯಾಂಕ್ನಲ್ಲಿ ಫಿಕ್ಸೆಡ್ ಡಿಪಾಜಿಟ್ ಮಾಡಿದರು. ಅನಂತರ ತಾಯಿಗೂ ತಿಳಿಸದಂತೆ ತಾನು ಮತ್ತೆ ಮದುವೆಯ ತೀರ್ಮಾನ ಮಾಡಿದರು.

ರಾಮಕೃಷ್ಣಯ್ಯನನ್ನು ಕಂಡು ಬಂದ ಮೇಲೆ ಎಂಟು ದಿನವಾದರೂ ಸುದ್ದಿಯಿಲ್ಲ. ಫೋನ್ ಮಾಡಿದರೆ ಸೂಕ್ತ ಸಮಾಧಾನವಿಲ್ಲ. ಮತ್ತೊಮ್ಮೆ ಆಂಜನೇಯ ವಧು ವರಾನ್ವೇಷಣ ಕೇಂದ್ರಕ್ಕೆ ಹೋದರು.

ಪೂಜೆ ಮುಗಿದ ಕೂಡಲೇ ಹಾಲಿನಲ್ಲಿ ಆಂಜನೇಯ ಅವರನ್ನು ನೋಡಿ ರಾಮಕೃಷ್ಣನಿಗೆ ಎದೆ ಡವಡವ ಎಂದಿತು. ಈ ಮನುಷ್ಯನಿಗೆ ಏನು ಹೇಳೋದು